ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು

೧೪೮ (೭೯) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೬೫-೬೬, ೧೯೬೬-೬೭ ರಲ್ಲಿ ಎಷ್ಟು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ?

ಆ) ರಾಜ್ಯದಲ್ಲಿ ಈಗ ಎಷ್ಟು ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ ? (ವಿವಿಧ ಕಾಲೇಜುಗಳ ಬಗ್ಗೆ ಪ್ರತ್ಯೇಕವಾಗಿ ವಿವರ ನೀಡುವುದು)

ಇ) ಈ ಎರಡು ವರ್ಷಗಳಲ್ಲಿ ಪ್ರವೇಶ ನೀಡಲ್ಪಟ್ಟ ವಿದ್ಯಾರ್ಥಿಗಳಲ್ಲಿ ಈ ರಾಜ್ಯದವರೆಷ್ಟು ? ಹಾಗೂ ಬೇರೆ ರಾಜ್ಯಗಳವರೆಷ್ಟು ?

ಈ) ಕಾಲೇಜುಗಳಿಗೆ ಕ್ಯಾಪಿಟೇಷನ್ ಶುಲ್ಕವಾಗಿ ಡೊನೇಷನ್‌ಗಳ ಮೂಲಕ ಎಷ್ಟು ಹಣ ಸಂದಾಯವಾಗಿದೆ ?

ಉ) ಅನುಮತಿ ನೀಡಿದ ಸಂಖ್ಯೆಯನ್ನು ಮೀರಿ ವಿದ್ಯಾರ್ಥಿಗಳನ್ನು ಸೇರಿಸಿರುವ ಕಾಲೇಜುಗಳಿವೆಯೇ ? ಹಾಗೂ ಯಾವ ಯಾವ ಕಾಲೇಜಿನಲ್ಲಿ ಇಂತಹ ಅಕ್ರಮ ನಡೆದಿವೆ ?

ಊ) ಸದರಿ ಆಡಳಿತ ವರ್ಗದವರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಅ) ಮೂರು.

ಆ) ರಾಜ್ಯದಲ್ಲಿ ಈಗ ೨೫೩೫ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ವಿವಿಧ ಕಾಲೇಜುಗಳ ವಿವರ ಇಂತಿವೆ :

ಸರ್ಕಾರಿ ಕಾಲೇಜುಗಳು

೧.	ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು	೧೫೫
೨.	ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು	೧೩೫
೩.	ವೈದ್ಯಕೀಯ ಮಹಾ ವಿದ್ಯಾಲಯ, ಬಳ್ಳಾರಿ	೧೩೦
೪.	ಕರ್ನಾಟಕ ವೈದ್ಯಕೀಯ ಮಹಾ ವಿದ್ಯಾಲಯ, ಹುಬ್ಬಳ್ಳಿ	೧೫೦

ಖಾಸಗಿ ಕಾಲೇಜುಗಳು

೫.	ಸೇಂಟ್ ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	೨೭೦
೬.	ಎಂ.ಎಸ್. ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು-೫೪	೧೪೦
೭.	ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು-೫	೧೫೦
೮.	ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	೧೫೦
೯.	ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ	೨೨೦
೧೦.	ಜೆ.ಎನ್. ವೈದ್ಯಕೀಯ ಮಹಾವಿದ್ಯಾಲಯ ಬೆಳಗಾಂ	೧೫೫
೧೧.	ಎಂ.ಆರ್. ವೈದ್ಯಕೀಯ ಮಹಾ ವಿದ್ಯಾಲಯ ಗುಲ್ಬರ್ಗ	೧೪೦
೧೨.	ಕೆ.ಎಂ.ಸಿ. ವೈದ್ಯಕೀಯ ಮಹಾ ವಿದ್ಯಾಲಯ, ಮಣಿಪಾಲ ದಂಗಳೂರು	೨೯೦
೧೩.	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ನಾಗಮಂಗಲ ಮಂಡ್ಯ ಜಿಲ್ಲೆ	೧೫೦
೧೪.	ಆಲ್ ಅಮೀನ್ ವೈದ್ಯಕೀಯ ಮಹಾ ವಿದ್ಯಾಲಯ ವಿಜಾಪುರ	೧೨೦
೧೫.	ಜೆ.ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು	೧೫೦
೧೬.	ಶ್ರೀ ದೇವರಾಜ್ ಅರಸ್ ಟ್ರಸ್ಟ್ ವೈದ್ಯಕೀಯ ಮಹಾವಿದ್ಯಾಲಯ ಕೋಲಾರ	೧೫೦
೧೭.	ಬಿ.ಎಲ್.ಡಿ.ಇ. ವೈದ್ಯಕೀಯ ಮಹಾ ವಿದ್ಯಾಲಯ, ವಿಜಾಪುರ	೧೫೦
	ಒಟ್ಟು	೨೫೩೫

(೩) ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ನೀಡಲ್ಪಟ್ಟ ವಿದ್ಯಾರ್ಥಿಗಳ ವಿವರ ಇಂತಿದೆ.

ಕಾಲೇಜಿನ ಹೆಸರು	೧೯೮೫-೮೬ ಕರ್ನಾಟಕ ರಾಜ್ಯ	ಇತರೆ ರಾಜ್ಯ	೧೯೮೬-೮೭ ಕರ್ನಾಟಕ ರಾಜ್ಯ	ಇತರೆ ರಾಜ್ಯ
೧. ಸರ್ಕಾರಿ ಕಾಲೇಜುಗಳು	೫೩೪	೧೬	೫೩೪	೧೬
೨. ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗ	೧೧೧	೪೭	೧೩೮	೫೭
೩. ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು	೮೦	೬೦	೯೭	೫೩
೪. ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	೮೩	೬೭	೯೩	೭೭
೫. ಜೆ.ಜೆ.ಎಂ. ವೈದ್ಯಕೀಯ ಕಾಲೇಜು ದಾವಣಗೆರೆ	೯೯	೧೦	೧೦೦	೧೪೦
೬. ಆಲ್ ಅಮಿನ್ ವೈದ್ಯಕೀಯ ಕಾಲೇಜು, ಬಿಜಾಪುರ	೨೯	೮೨	೩೯	೭೯
೭. ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	೮೭	೬೮	೮೬	೭೬

(೪) ೧೯೮೪ರ ಕ್ಯಾಪಿಟೇಷನ್ ಶುಲ್ಕ ನಿರೋಧ ಕಾಯಿದೆ ಪ್ರಕಾರ ಜುಲೈ ೮೫ ರಿಂದ ಜಾರಿಗೆ ಬರುವ ಪೂರ್ವ ಪ್ರಾರಂಭವಾದ ಕಾಲೇಜುಗಳು ೫ ವರ್ಷಗಳವರೆಗೆ ವಿದೇಶಿ ಮತ್ತು ವಿದೇಶದಲ್ಲಿರುವ ಭಾರತೀಯ ವಿದ್ಯಾರ್ಥಿಗಳಿಂದ ರೂ. ೨ ಲಕ್ಷ ಮತ್ತು ಇತರರಿಂದ ರೂ. ೧.೫ ಲಕ್ಷದಂತೆ ಕ್ಯಾಪಿಟೇಶನ್ ಶುಲ್ಕ ವಸೂಲು ಮಾಡಲು ನಿಗದಿಪಡಿಸಿದೆ. ಆದರೆ ವಸೂಲಿ ಮಾಡಿದ ಓಟ್ಟು ಮೊತ್ತದ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇರುವುದಿಲ್ಲ. ಕಾಯಿದೆ ಜಾರಿಗೆ ಬಂದ ನಂತರ ಪ್ರಾರಂಭವಾದ ಕಾಲೇಜುಗಳು ಈ ಶುಲ್ಕವನ್ನು ಪಡೆಯಲು ಅವಕಾಶವಿಲ್ಲ.

(೫) ಅನುಮತಿ ನೀಡಿದ ಸಂಖ್ಯೆಯನ್ನು ಮೀರಿ ವಿದ್ಯಾರ್ಥಿಗಳನ್ನು ಸೇರಿಸಿರುವ ಕಾಲೇಜುಗಳು

	೧೯೮೫-೮೬	೧೯೮೬-೮೭
೧. ಎಂ.ಆರ್. ಮೆಡಿಕಲ್ ಕಾಲೆಜು	ಇಲ್ಲ	೫೧ ಹೆಚ್ಚಿಗೆ
೨. ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು ಮೈಸೂರು	ಇಲ್ಲ	೪೦ ಹೆಚ್ಚಿಗೆ
೩. ಜೆ.ಜೆ.ಎಂ. ವೈದ್ಯಕೀಯ ಕಾಲೇಜು ದಾವಣಗೆರೆ	ಇಲ್ಲ	೪೦ಹೆಚ್ಚಿಗೆ
೪. ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಬೆಂಗಳೂರು	೩೩ ಹೆಚ್ಚಿಗೆ	೫೩ ಹೆಚ್ಚಿಗೆ

(೬) ೧೯೮೫-೮೬ನೇ ಸಾಲಿಗೆ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ೩೩ ವಿದ್ಯಾರ್ಥಿಗಳಿಗೆ ನೀಡಿದ ಪ್ರವೇಶವನ್ನು ಅಂಗೀಕರಿಸಿದೆ. ಕೇಳಿದ ಬೇಡಿಕೆಯನ್ನು ಸರ್ಕಾರ ನಿರಾಕರಿಸಿದೆ. ಅದರ ವಿರುದ್ಧ ಕಾಲೇಜಿನಲ್ಲಿ ಆಡಳಿತ ಮಂಡಳಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹೂಡಿದ್ದಾರೆ. ೧೯೮೬-೮೭ ರಲ್ಲಿ ಕಾಲೇಜುಗಳು ಹೆಚ್ಚಿಗೆ ಪ್ರವೇಶ ಮಾಡಿರುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾವು ಒಂದು ವಿಷಯವನ್ನು ಇಲ್ಲಿ ಗಮನಿಸಬೇಕಾಗಿದೆ. ಇವರು ಅನುಮತಿ ಕೊಟ್ಟ ಪ್ರಕಾರ ಡೊನೇಷನ್ ವಸೂಲಿ ಮಾಡಿದರೆ ೪೫ ಕೋಟಿ ೩೪ ಲಕ್ಷ ರೂಪಾಯಿಗಳಾಗುತ್ತವೆ. ಆಮೇಲೆ, ಇವರ ಪರ್ಮಿಷನ್ ಇಲ್ಲದೇ ತೆಗೆದು ಕೊಂಡಿರುವ ಸೀಟುಗಳಿಗೆ ಲೆಕ್ಕ ಹಾಕಿದರೆ ೪ ಕೋಟಿ ೪೨ ಲಕ್ಷ ರೂಪಾಯಿಗಳು ಪ್ರೈವೇಟ್ ಕಾಲೇಜ್ ನವರಿಗೆ ಸಿಗುತ್ತದೆ. ಇವರು ಕೊಟ್ಟಿರುವ ಉತ್ತರದಲ್ಲಿ ೭ ಕಾಲೇಜುಗಳದು ಮಾತ್ರ ಮಾಹಿತಿಯನ್ನು ಕೊಟ್ಟಿದ್ದಾರೆ. ಮಿಕ್ಕ ೧೦ ಕಾಲೇಜುಗಳ ಬಗ್ಗೆ ಹೇಳಿಲ್ಲ. ಅವರುಗಳು ಎಷ್ಟು ಜನರಿಗೆ ಪ್ರವೇಶ ವನ್ನು ಕೊಟ್ಟಿದ್ದಾರೆ ಎಂಬುದನ್ನು ನಾವು ಗಮನಿಸಬೇಕು.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ನೇರವಾಗಿ ಪ್ರಶ್ನೆ ಕೇಳಿಬಿಡಿ.

ಶ್ರೀ ಆರ್. ವೆಂಕಟರಾಮಯ್ಯ.—ಎಂ.ಆರ್. ಕಾಲೇಜಿನಲ್ಲಿ ೪೭ ಸೀಟುಗಳು ಮಾತ್ರ ಇತ್ತು. ಆದರೆ ಅವರು ಇನ್ನು ೧೦ ಸೀಟುಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಜೆ.ಎಸ್.ಎಸ್. ಕಾಲೇಜ್‌ನವರೂ ೧೦ ಸೀಟುಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಜೆ.ಜಿ.ಎಂ. ಕಾಲೇಜಿನವರು ೩೦ ಸೀಟುಗಳನ್ನು ಹೆಚ್ಚಿಗೆ ತೆಗೆದುಕೊಂಡಿದ್ದಾರೆ. ಈ ಕಾಲೇಜಿನವರು ಒಂದೊಂದು ಸೀಟಿಗೂ ೫ ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಈ ಕಾಲೇಜಿನವರು ವಸೂಲಿ ಮಾಡಿರುವ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಮಾಹಿತಿ ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ಕಾಲೇಜುಗಳ ಮೇಲೆ ಸರ್ಕಾರದ ಕಂಟ್ರೋಲ್ ಇಲ್ಲವೆ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ನೇರವಾಗಿ ವಿಷಯವನ್ನು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—೫ ಕೋಟಿ ರೂಪಾಯಿಗಳನ್ನು ಲೂಟಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಇದು ನ್ಯಾಯವೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಹೆಚ್ಚಿಗೆ ಸೀಟುಗಳನ್ನು ಮಾಡಿಕೊಳ್ಳುವುದಕ್ಕೆ ನಾವು ಪೂರ್ವಾನುಮತಿ ಕೊಟ್ಟಿಲ್ಲ. ಆದರೆ, ಕೆಲವು ಸಂದರ್ಭಗಳಲ್ಲಿ ಹೆಚ್ಚು ಸೀಟುಗಳನ್ನು ಮಾಡಿಕೊಂಡಿದ್ದಾರೆ. ಆನಂತರ, ಸರ್ಕಾರದ ಅನುಮತಿಯನ್ನು ಪಡೆಯುತ್ತಾರೆ. ಇದು ಬಹಳ ಸೂಕ್ಷ್ಮವಾದ ಪ್ರಶ್ನೆ. ಈ ಕಾಲೇಜುಗಳವರ ಮೇಲೆ ಕ್ರಮ ತೆಗೆದುಕೊಂಡರೆ, ಸರ್ಕಾರದ ಕಡೆಯಿಂದ ಕಳುಹಿಸಿ ಕೊಟ್ಟಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ನಾವು ಖಾಸಗಿ ಕಾಲೇಜುಗಳವರಿಗೆ ಇಷ್ಟು ಸೀಟುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಮತ್ತು ಆಲ್ಲಿರತಕ್ಕ ಅನುಕೂಲತೆಗಳನ್ನು ನೋಡಿಕೊಂಡು, ಹೆಚ್ಚು ಸೀಟುಗಳನ್ನು ಕೊಡುವುದಕ್ಕೆ ಸಾಧ್ಯತೆ ಇದೆಯೇ ಇಲ್ಲವೇ ಎನ್ನುವ ಬಗ್ಗೆ ಪರಿಶೀಲನೆ ಮಾಡಿ, ತಜ್ಞರ ವರದಿಗಳನ್ನು ಆಧಾರವಾಗಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಇಂತಹವರಿಗೆ ಇಷ್ಟು ಸೀಟುಗಳು ಎಂದು ಫಿಕ್ಸ್ ಮಾಡಿದ್ದಾರೆ. ಅನೇಕ ಕಾಲೇಜುಗಳಿಗೆ ಆಸ್ಪತ್ರೆಗಳ ಸೌಲಭ್ಯ ಇಲ್ಲ. ಇವೊತ್ತಿನ ದಿವಸ ಈ ವೈದ್ಯಕೀಯ ಸಂಸ್ಥೆಗಳು ಸೀಟುಗಳನ್ನು ಮಾರಾಟ ಮಾಡತಕ್ಕಂಥ ಸಂಸ್ಥೆಗಳು ಆಗಿವೆ. ಯಾವುದೇ ಆಗತ್ಯ-ಅವಶ್ಯಕ ಸೌಲಭ್ಯಗಳನ್ನು ಕೊಡದಿದ್ದರೂ, ಕ್ಲಿನಿಕ್ ಪೆಸಿಲಿಟಿ ಇಲ್ಲದಿದ್ದರೂ ಕೂಡ ಸುಮಾರು ಐದು ಕೋಟಿ ರೂಪಾಯಿಗಳಿಗೂ ಜಾಸ್ತಿ ವಸೂಲಿ ಮಾಡಲು ಖಚಿತ ಸರಕಾರದವರು ಅವಕಾಶ ಮಾಡಿಕೊಟ್ಟರು ಅಂತಹ ಅಕ್ರಮ ಸೀಟುಗಳನ್ನು ಕೊಟ್ಟವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬಹುದಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಅವರ ಕಲ್ಪನೆಗೆ ಸಿಕ್ಕಿದ ಒಂದು ಲೆಕ್ಕವನ್ನು ಸಮ್ಮ ಮುಂದಿಟ್ಟಿದ್ದಾರೆ. ರಾಜ್ಯದ ಮೂರು ಕಾಲೇಜುಗಳಿಂದ ನಮಗೆ ಬಂದಿರತಕ್ಕಂಥ ಮಾಹಿತಿ ಹೀಗೆ ಇದೆ. ಅದು ಪ್ರಸಕ್ತ ಸಾಲಿನದ್ದು.

(೧) ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ, ೫,೧೮,೧೦,೦೦೦-೦೦

(೨) ಡಾ|| ಅಂಬೇಡ್ಕರ್ ಕಾಲೇಜು, ಬೆಂಗಳೂರು, ೯೯,೬೫,೦೦೦-೦೦

(೩) ಜೆ.ಎಸ್. ವೈದ್ಯಕೀಯ ಕಾಲೇಜು ಬೆಂಗಳೂರು, ೬೭,೫೬,೦೦೦-೦೦

ಈ ರೀತಿಯಲ್ಲಿ ಸಂಬಂಧಪಟ್ಟಿರತಕ್ಕಂಥ ಕಾಲೇಜಿನವರು ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ಸದನದಲ್ಲಿಟ್ಟಿದ್ದೇನೆ. ಬೇರೆಯವರು ಈ ವಿವರಣೆಗಳನ್ನು ಕೊಟ್ಟಿಲ್ಲ.